# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1177 |
| 2 | ಸದಸ್ಯರ ಹೆಸರು | : | ಶ್ರೀ ಎನ್. ರವಿ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 23-12-2021 |
| 4 | ಉತ್ತರಿಸುವವರು | : | ಮಾನ್ಯ ಮುಖ್ಯಮಂತ್ರಿಗಳು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದಲ್ಲಿ ರಾಜಕಾಲುವೆ ಒತ್ತುವರಿ ಮಾಡಿರುವ 2626 ಪ್ರಕರಣಗಳಲ್ಲಿ ಎಷ್ಟು ಪ್ರಕರಣಗಳು ತೆರವುಗೊಳಿಸಲು ಬಾಕಿ ಇರುತ್ತದೆ; ಸದರಿ ಒತ್ತುವರಿ ಮಾಡಿದ ಜಾಗದ ಮಾರುಕಟ್ಟೆ ಮೌಲ್ಯ ಎಷ್ಟು; | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ರಾಜಕಾಲುವೆ ಒತ್ತುವರಿ ಮಾಡಿರುವ ಒಟ್ಟು 2626 ಪ್ರಕರಣಗಳಲ್ಲಿ 714 ಪ್ರಕರಣಗಳು ತೆರವುಗೊಳಿಸಲು ಬಾಕಿ ಇರುತ್ತದೆ. ಸದರಿ ಒತ್ತುವರಿ ಮಾಡಿದ ಜಾಗದ ಮಾರುಕಟ್ಟೆ ಮೌಲ್ಯವನ್ನು ನಿರ್ಧರಿಸಲಾಗಿರುವುದಿಲ್ಲ. |
| ಆ) | 2015-19ರ ಅವಧಿಯಲ್ಲಿ ರಾಜಕಾಲುವೆ ಒತ್ತುವರಿ ಮಾಡಿರುವ ಸ್ಥಳಗಳಿಗೆ ಸಂಬಂಧಿಸಿದಂತೆ ಆ ವಿಭಾಗದ ಸಮಯದಲ್ಲಿ ಕರ್ತವ್ಯದಲ್ಲಿದ್ದ ಅಧಿಕಾರಿಗಳು ಯಾರು; (ಹೆಸರು ಮತ್ತು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆಯೊಂದಿಗೆ ಮಾಹಿತಿ ನೀಡುವುದು) | 2015-2019ರ ಅವಧಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರಾಜಕಾಲುವೆ ಒತ್ತುವರಿ ಮಾಡಿರುವ ಸ್ಥಳಗಳಿಗೆ ಸಂಬಂಧಿಸಿದಂತೆ ಬೆಂಗಳೂರು ಮಹಾನಗರ ಕಾರ್ಯಾಚರಣೆ ಪಡೆ ಪೊಲೀಸ್ ಠಾಣೆ ಅಪರಾಧ ಸಂಖ್ಯೆ: 104/2016-17, ದಿನಾಂಕ: 11-08-2016 ರಲ್ಲಿ 20 ಮಂದಿ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಾಗಿದ್ದು, ಆ ಸಮಯದಲ್ಲಿ ಬಿ.ಬಿ.ಎಂ.ಪಿ ಯಲ್ಲಿ ಕಾರ್ಯ ನಿರ್ವಹಿಸಿದ್ದ ಬಿಬಿಎಂಪಿ ಅಧಿಕಾರಿಗಳ ವಿವರಗಳು ಮತ್ತು ಅವರುಗಳು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆಯ ಮಾಹಿತಿಗಳು ಈ ಕೆಳಕಂಡಂತಿರುತ್ತದೆ. |

| ಕ್ರ ಸಂ. | ಅಧಿಕಾರಿಗಳ ಹೆಸರು ಮತ್ತು ಪದನಾಮ | ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆ |
|---|---|---|
| 1. | ಶ್ರೀ ಗುರುಪ್ರಸಾದ್, ಸಹಾಯಕ ಅಭಿಯಂತರರು, ಬಿಬಿಎಂಪಿ | ಪ್ರಭಾರದ ಸಹಾಯಕ ನಿರ್ದೇಶಕರು (ನಗರ ಯೋಜನೆ- ರಾಜರಾಜೇಶ್ವರಿನಗರ) |
| 2. | ಶ್ರೀ ಗೋವಿಂದರಾಜು, ಜಂಟಿ ನಿರ್ದೇಶಕರು (ನಗರ ಯೋಜನೆ-ದಕ್ಷಿಣ), ಬಿಬಿಎಂಪಿ | ನಿವೃತ್ತಿ ಹೊಂದಿರುತ್ತಾರೆ. |
| 3. | ಶ್ರೀ ಶಶಿಧರ್, ಅಪರ ನಿರ್ದೇಶಕರು (ನಗರ ಯೋಜನೆ), ಪಿಡಬ್ಲ್ಯೂಡಿ | ನಿವೃತ್ತಿ ಹೊಂದಿರುತ್ತಾರೆ. |

...2.

| | | | | |
|---|---|---|---|---|
| | | 4. | ಶ್ರೀ ಬಿ.ಟಿ. ಮೋಹನ್ ಕೃಷ್ಣ<br>ಉಪ ನಿರ್ದೇಶಕರು (ನಗರ ಯೋಜನೆ), ಬಿಬಿಎಂಪಿ | ಮುಖ್ಯ ಅಭಿಯಂತರರು (ಪೂರ್ವ) |
| | | 5. | ಶ್ರೀ ಚೌಡೇಗೌಡ,<br>ಅಪರ ನಿರ್ದೇಶಕರು (ನಗರ ಯೋಜನೆ), ಪಿಡಬ್ಲ್ಯೂಡಿ | ನಿವೃತ್ತಿ ಹೊಂದಿರುತ್ತಾರೆ. |
| | | 6. | ಶ್ರೀ ಕೆ. ವಿರೇಂದ್ರನಾಥ್<br>ಅಪರ ನಿರ್ದೇಶಕರು (ನಗರ ಯೋಜನೆ) | ನಿವೃತ್ತಿ ಹೊಂದಿರುತ್ತಾರೆ. |
| | | 7. | ಶ್ರೀ ಮೊಹಮ್ಮದ್ ಅಬ್ದುಲ್ ಅಜೀಮ್<br>ಸ.ಕಾ.ನಿ.ಅ | ಸ.ಕಾ.ನಿ.ಅ<br>ಬಿಬಿಎಂಪಿ |
| | | 8. | ಶ್ರೀ ಜಿ. ಗುರುಮೂರ್ತಿ,<br>ಸಹಾಯಕ ಅಭಿಯಂತರರು | ಸಹಾಯಕ ಅಭಿಯಂತರರು, ಬಿಬಿಎಂಪಿ |
| | | 9. | ಶ್ರೀ ಜಯಕುಮಾರ್ ಡಿ. ಪಾಟೀಲ್<br>ಅಪರ ನಿರ್ದೇಶಕರು (ನಗರ ಯೋಜನೆ), ಪಿಡಬ್ಲ್ಯೂಡಿ | ನಿವೃತ್ತಿ ಹೊಂದಿರುತ್ತಾರೆ. |
| | | 10. | ಶ್ರೀ ಡಿ.ಎಸ್. ಸರ್ವೋತ್ತಮ ರಾಜ್,<br>ಅಪರ ನಿರ್ದೇಶಕರು (ನಗರ ಯೋಜನೆ), ನಗರ ಯೋಜನಾ ವಿಭಾಗ | ಅಪರ ನಿರ್ದೇಶಕರು (ನಗರ ಯೋಜನೆ) |
| | | 11. | ಶ್ರೀ ಎಸ್. ಮತ್ಯುಂಜಯ,<br>ಅಧೀಕ್ಷಕ ಅಭಿಯಂತರರು, ಪಿಡಬ್ಲ್ಯೂಡಿ | ನಿವೃತ್ತಿ ಹೊಂದಿರುತ್ತಾರೆ. |
| | | 12. | ಶ್ರೀ ಟಿ. ನಟರಾಜ್,<br>ಮುಖ್ಯ ಅಭಿಯಂತರರು | ನಿವೃತ್ತಿ ಹೊಂದಿರುತ್ತಾರೆ. |
| | | 13. | ಶ್ರೀ ಲಿಯಾಕತ್<br>ಸಹಾಯಕ ನಿರ್ದೇಶಕರು (ನಗರ ಯೋಜನೆ–ಪೂರ್ವ) ನಗರ ಯೋಜನಾ ವಿಭಾಗ | ಸಹಾಯಕ ನಿರ್ದೇಶಕರು (ನಗರ ಯೋಜನೆ–ಪೂರ್ವ) |
| | | 14. | ಶ್ರೀಮತಿ ಸುನೀತಾ,<br>ಸಹಾಯಕ ಅಭಿಯಂತರರು, ಪಿಡಬ್ಲ್ಯೂಡಿ | ಸಹಾಯಕ ಅಭಿಯಂತರರು, ಪಿಡಬ್ಲ್ಯೂಡಿ |

<table>
<tr>
<td></td>
<td></td>
<td>
<table>
<tr><td>15.</td><td>ಶ್ರೀ ಗಂಗಪ್ಪ,<br>ಸ.ಕಾ.ನಿ.ಅ, ಪಿಡಬ್ಲ್ಯೂಡಿ</td><td>ನಿವೃತ್ತಿ ಹೊಂದಿರುತ್ತಾರೆ.</td></tr>
<tr><td>16.</td><td>ಮುನಿಕೃಷ್ಣ,<br>ಮುಖ್ಯ ಅಭಿಯಂತರರು, ಬಿಬಿಎಂಪಿ</td><td>ನಿವೃತ್ತಿ ಹೊಂದಿರುತ್ತಾರೆ.</td></tr>
</table>
</td>
</tr>
<tr>
<td>ಇ)</td>
<td>2015–19ರ ಅವಧಿಯಲ್ಲಿ ರಾಜಕಾಲುವೆ ಒತ್ತುವರಿ ಮಾಡಿರುವ 2626 ಪ್ರಕರಣದಲ್ಲಿ ಸಂಬಂಧಿತ ವಿಭಾಗ ಅಧಿಕಾರಿಗಳು ಸದರಿ ಒತ್ತುವರಿದಾರರಿಗೆ ಸಹಕರಿಸಿದ ಕುರಿತು ಸರ್ಕಾರದ ನಿಲುವೇನು: ಅಂತಹ ಎಷ್ಟು ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಾಗಿದೆ; ಇಲ್ಲವಾದಲ್ಲಿ, ಯಾವಾಗ ಶಿಸ್ತು ಕ್ರಮಕೈಗೊಳ್ಳಲಾಗುವುದು?</td>
<td>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ರಾಜಕಾಲುವೆಗಳ ಒತ್ತುವರಿಗೆ ಸಂಬಂಧಿಸಿದಂತೆ ಈಗಾಗಲೇ ಬೆಂಗಳೂರು ಮಹಾನಗರ ಕಾರ್ಯಾಚರಣೆ ಪಡೆ ಪೊಲೀಸ್ ಠಾಣೆ ಅಪರಾಧ ಸಂಖ್ಯೆ: 104/2016–17, ದಿನಾಂಕ: 11–08–2016 ರಂತೆ ಒಟ್ಟು 20 ಅಧಿಕಾರಿಗಳ (ಆ ಸಮಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಒಟ್ಟು 16 ಬಿಬಿಎಂಪಿ ಅಧಿಕಾರಿಗಳು) ವಿರುದ್ಧ ಸರ್ಕಾರದ ಹಂತದಲ್ಲಿ ಇಲಾಖಾ ವಿಚಾರಣೆ ನಡೆಸಲು ನಿವೃತ್ತ ನ್ಯಾಯಾಧೀಶರಾದ, ಶ್ರೀ ಬಿ. ಎಂ. ಅಂಗಡಿ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಲಾಗಿರುತ್ತದೆ.</td>
</tr>
</table>

**ನಅಇ 398 ಎಂಎನ್‌ಯು 2021**

**(ಬಸವರಾಜ ಬೊಮ್ಮಾಯಿ)**

ಮುಖ್ಯಮಂತ್ರಿ